ಉಂಟಾಗುತ್ತದೆಂದು ತೀರ್ಮಾನಿಸಿ ತಾನು ನೀಡುತ್ತಿರುವ ಆರ್ಥಿಕ ಸಾಲ ಸೌಲಭ್ಯವನ್ನು ನಿಲ್ಲಿಸಿದೆ.

ಈಗಾಗಲೇ ಸರ್ಕಾರವು ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ತನ್ನು ಒದಗಿಸುವ ವಿಷಯದಲ್ಲಿ ಒಂದು ಸಂಪುಟ ಉಪ ಸಮಿತಿಯನ್ನು ರಚಿಸಿರುತ್ತದೆ. ಅಲ್ಲದೇ ವಿದ್ಯುಚ್ಛಕ್ತಿ ಮಂಡಳಿ ಮತ್ತು ಕರ್ನಾಟಕ ವಿದ್ಯುತ್ ನಿಗಮಗಳ ಜಂಟೀ ಸಮಿತಿಯೂ ಕೂಡ ಈ ವಿಷಯವನ್ನು ಪರಿಶೀಲಿಸುತ್ತಿದೆ. ಈ ಸಮಿತಿಗಳ ಶಿಫಾರಸ್ಸುಗಳ ಆಧಾರದ ಮೇಲೆ ಸರ್ಕಾರವು ರೈತರ ಪಂಪುಸೆಟ್ಟುಗಳಿಗೆ ಕೊಟ್ಟಿರುವ ರಿಯಾಯಿತಿಯನ್ನು ಮುಂದುವರಿಸುವ ಬಗ್ಗೆ ಒಂದು ನಿರ್ಧಾರವನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತದೆ.

ಶಿವಮೊಗ್ಗ-ಭದ್ರಾವತಿ ಮಹಾನಗರ ಪಾಲಿಕೆಗೆ ಬಿಡುಗಡೆ ಆಗಿರುವ ಹಣಕ್ಕೆ ನಿರ್ಬಂಧ

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ): ಮಾನ್ಯ ಉಪಾಧ್ಯಕ್ಷರೆ, ಶಿವಮೊಗ್ಗ-ಭದ್ರಾವತಿ ಮಹಾನಗರ ಪಾಲಿಕೆ ರೂಪಾಯಿ 3 ಕೋಟಿ ಸಾಲ ಬಿಡುಗಡೆಯಾಗಿದ್ದು, ಆ ಹಣಕ್ಕೆ ನಿರ್ಬಂಧ ಯಾವಾಗಿನಿಂದ ಇತ್ತು? ಹಾಗೂ ನಿರ್ಬಂಧ ಯಾವಾಗ ತೆಗೆದು ಹಾಕಿದೆ? ಈ ಹಣಕ್ಕೆ ನಿರ್ಬಂಧ ಇದ್ದಾಗಲೂ ಇದಕ್ಕೆ ಬಡ್ಡಿ ಹಾಕಿದ್ದು ಸರಿಯೇ? ಹಾಗೂ ಎಷ್ಟು ಬಡ್ಡಿ ಹಾಕಲಾಗಿದೆ? ಈ ಬಡ್ಡಿ ಹಣವನ್ನು ರದ್ದು ಮಾಡಲಾಗಿದೆಯೇ? ನಿರ್ಬಂಧ ಇರುವ ಹಣಕ್ಕೆ ಬಡ್ಡಿ ಹಾಕಿದ್ದು ಆ ಬಡ್ಡಿ ವಸೂಲಾತಿಗೆ ಎಷ್ಟು ಹಣ ಜಮಾ ಆಗಿದೆ? ಆ ವಸೂಲಾತಿ ಹಣ ವಾಪಸ್ಸು ಮಾಡುವಿರಾ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು): ಮಾನ್ಯ ಉಪಾಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಈ ಕೆಳಕಂಡ ಹೇಳಿಕೆಯನ್ನು ಓದುತ್ತೇನೆ.

ಶಿವಮೊಗ್ಗ ಭದ್ರಾವತಿ ಮಹಾನಗರ ಪಾಲಿಕೆಗೆ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು 3 ಕೋಟಿ ರೂ.ಗಳನ್ನು ದಿನಾಂಕ 27-8-92ರಂದು ಸರ್ಕಾರವು ಮಂಜೂರಾತಿ ನೀಡಿದೆ. ಈ ಸಾಲವನ್ನು ಹತ್ತಿ ವಾರ್ಷಿಕ ಸಮ ಕಂತುಗಳಲ್ಲಿ ಶೇಕಡಾ $12\frac{1}{2}$ ಯಷ್ಟು ಬಡ್ಡಿ ಮತ್ತು ಶೇಕಡಾ 4 ರಷ್ಟು ಚಕ್ರ ಬಡ್ಡಿಯೊಡನೆ, ಪಾವತಿ ಮಾಡಬೇಕು. ಹೊಸದಾಗಿ ರಚಿತವಾದ ಈ ನಗರ ಪಾಲಿಕೆಯಲ್ಲಿ ಅಗತ್ಯವಿದ್ದಷ್ಟು ತಾಂತ್ರಿಕ ಹುದ್ದೆಗಳು ಇಲ್ಲದಿದ್ದುದರಿಂದ ಸರ್ಕಾರವು ತನ್ನ ಪತ್ರ ದಿನಾಂಕ 8-12-92ರಲ್ಲಿ ಈ ಹಣವನ್ನು ತಾಂತ್ರಿಕ ಹುದ್ದೆ ಮಂಜೂರಾಗುವವರೆಗೆ ಉಪಯೋಗಿಸಕೂಡದು ಎಂದು ಆಯುಕ್ತರಿಗೆ ಸೂಚನೆ ನೀಡಿತು. ಮತ್ತೆ ಸರ್ಕಾರವು ದಿನಾಂಕ 05-3-93ರಲ್ಲಿ ಈ ಅಭಿವೃದ್ಧಿ ಕಾರ್ಯಗಳನ್ನು ಲೋಕೋಪಯೋಗಿ ಇಲಾಖೆಯ ಮೂಲಕ ಕಾರ್ಯಗತಗೊಳಿಸಬೇಕೆಂದು ಸೂಚನೆ ನೀಡಿತು. ಶಿವಮೊಗ್ಗ ಭದ್ರಾವತಿ ಮಹಾನಗರ ಪಾಲಿಕೆಯ ಆಡಳಿತಾಧಿಕಾರಿಗಳಾದ ಜಿಲ್ಲಾಧಿಕಾರಿಗಳು, ಈ ಕೆಲಸಗಳನ್ನು ಲೋಕೋಪಯೋಗಿ ಇಲಾಖೆಯ ಮೂಲಕ ಕಾರ್ಯಗತಗೊಳಿಸಿದಲ್ಲಿ 40 ಲಕ್ಷ ರೂ. ಇ.ಟಿ.ಪಿ. ಶುಲ್ಕ ನೀಡಬೇಕಾಗುವುದರಿಂದ ಕಾರ್ಪೊರೇಷನ್ ವತಿಯಿಂದಲೇ ಈ ಕೆಲಸ ಕಾರ್ಯಗಳನ್ನು ಮಾಡಿಸಲು ಅನುಮತಿ ಕೊಡಬೇಕೆಂದು ಕೋರಿದರು. ಸರ್ಕಾರವು ಜಿಲ್ಲಾಧಿಕಾರಿಗಳ ಸಲಹೆಯನ್ನು ಒಪ್ಪಿ ದಿನಾಂಕ 20-10-93ರಂದು ಅಭಿವದ್ಧಿ ಕೆಲಸಕಾರ್ಯಗಳನ್ನು ಕಾರ್ಪೊರೇಷನ್ ವತಿಯಿಂದಲೇ ಆಡಳಿತಾಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಕೈಗೆತ್ತಿಕೊಳ್ಳಲು ಅನುಮತಿ ನೀಡಿತು. ಸರ್ಕಾರವು ಸಾಲದ ಹಣವನ್ನು ನಗರ ಪಾಲಿಕೆಯು ಉಪಯೋಗಿಸಿಕೊಳ್ಳುವ ಬಗ್ಗೆ ದಿನಾಂಕ 8-12-92ರಿಂದ 5-3-93ರವರೆಗೆ ಮಾತ್ರ ತಡೆಯಾಜ್ಞೆ ನೀಡಿತ್ತು. ಜಕಾತಿ ಅನುದಾನದಿಂದ ರೂ 5,,00,000 ಬಡ್ಡಿಯನ್ನು ಮುರಿದುಕೊಳ್ಳಲಾಗಿದೆ. ಸರ್ಕಾರವು ನಗರ ಪಾಲಿಕೆಯು ಸಾಲದ ಹಣವನ್ನು ಪಡೆದ ದಿನಾಂಕದಿಂದ ಮಾತ್ರ ಬಡ್ಡಿಯನ್ನು ವಿಧಿಸುವ ಬಗ್ಗೆ

ಮತ್ತು ಈಗಾಗಲೇ ಮುರಿದು ಕೊಂಡಿರುವ ಬಡ್ಡಿ ಹಣವನ್ನು ಮುಂದಿನ ಸಾಲ ಮರುಪಾವತಿ ಕಂತುಗಳಿಗೆ ಹೊಂದಿಸಿಕೊಳ್ಳುವ ಬಗ್ಗೆ ಪರಿಶೀಲಿಸುತ್ತಿದೆ.

ಚಿಕ್ಕನಾಯಕನಹಳ್ಳಿಗೆ ಕ್ರೀಡಾಂಗಣ ಮಂಜೂರಾತಿ.

ಶ್ರೀ ಜಿ.ಸಿ. ಮಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಮಾನ್ಯ ಉಪಾಧ್ಯಕ್ಷರೆ, ಚಿಕ್ಕನಾಯಕನಹಳ್ಳಿಗೆ ಒಂದು ಕ್ರೀಡಾಂಗಣದ ಅಗತ್ಯವನ್ನು ಮನಗಂಡು ತುಮಕೂರು ಜಿಲ್ಲಾ ಪರಿಷತ್ ನವರು ನಿಲುವಳಿ ಪಾಸ್‌ಮಾಡಿ ಅಲ್ಲಿಗೆ ಒಂದು ಕ್ರೀಡಾಂಗಣ ಮಾಡಬೇಕೆಂದರೂ ಸರ್ಕಾರ ಮಾಡದಿರಲು ಕಾರಣವೇನು? ಹಾಗೂ ಈ ಬಗ್ಗೆ ನಿವೇಶನ ದೊರಕಿಸಿ ಕೊಟ್ಟಾಗ್ಯೂ ಹಾಗೂ ಸದರಿ ಕನ್ನಡ ಸಂಸ್ಕೃತಿ ಕ್ರೀಡಾ ಮಂತ್ರಿಗಳು ಕೂಡ ಸ್ಥಳ ನೋಡಿ ಬಂದು ವಾರದೊಳಗೆ ಈ ಬಗ್ಗೆ ಕಡತ ತಯಾರಿಸಲು ತಿಳಿಸಿದಾಗ್ಯೂ ಕೂಡ ಕಾರ್ಯ ಆರಂಭವಾಗದಿರಲು ಕಾರಣವೇನು? ಈ ಬಗ್ಗೆ ಸರ್ಕಾರದ ನಿಲುವೇನು? ಅಲ್ಲಿ ಒಂದು ಕ್ರೀಡಾಂಗಣ ಆರಂಭವಾಗುವುದೇ ಇಲ್ಲವೇ ಎಂಬ ಬಗ್ಗೆ ಸ್ಪಷ್ಟಪಡಿಸಿ ಆ ದಿಕ್ಕಿನಲ್ಲಿ ಆಗಿರುವ ಕೆಲಸದ ಬಗ್ಗೆ ತಿಳಿಸುವಿರಾ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಈವೊಂದು ವಿಷಯದ ಬಗ್ಗೆ ನಾಳೆ ಉತ್ತರ ಕೊಡಲು ಅವಕಾಶ ಮಾಡಿಕೊಡಿ.

ಉಪಾಧ್ಯಕ್ಷರು: ಆಗಬಹುದು. ಈಗ ಸದನದ ಕಲಾಪ ಮುಂದುವರೆದು ಪುನಃ ಮಧ್ಯಾಹ್ನ 3 ಗಂಟೆಗೆ ಸೇರುವುದು.

(ಸದನವು ಮಧ್ಯಾಹ್ನ 3 ಗಂಟೆ 45 ನಿಮಿಷಕ್ಕೆ ಪುನರಾರಂಭಗೊಂಡಿತು)

ಮಾನ್ಯ ಅಧ್ಯಕ್ಷರು (ಶ್ರೀ ವಿ.ಎಸ್. ಕೌಜಲಗಿಯವರು) ಪೀಠವನ್ನಲಂಕರಿಸಿದರು

ರಾಜ್ಯಪಾಲರ ಭಾಷಣದ ವಂದನಾರ್ಪಣ ಪ್ರಸ್ತಾವ

ಅಧ್ಯಕ್ಷರು: ರಾಜ್ಯಪಾಲರ ಭಾಷಣದ ವಂದನಾರ್ಪಣ ಪ್ರಸ್ತಾವದ ಮೇಲಿನ ಚರ್ಚೆಗೆ ಈಗ ನಮಗೆ ಸಿಗುವ ವೇಳೆ 900 ಮಿನಿಟುಗಳು. ಅದರಲ್ಲಿ ಆಳುವ ಪಕ್ಷಕ್ಕೆ 700, ವಿರೋಧಪಕ್ಷದವರಿಗೆ 200 ಮಿನಿಟುಗಳ ಟೈಂ ಕೊಡಲಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ ಗಂಭೀರವಾದ ಸಮಸ್ಯೆಗಳಿವೆ. ಐದು ದಿವಸ ಸತತವಾಗಿ ನಾವು ಚರ್ಚೆ ಮಾಡಬೇಕೆಂದು ಹೇಳಿದ್ದೇವೆ. ಆದರೆ ವಿರೋಧಪಕ್ಷಗಳಿಗೆ 200 ಮಿನಿಟು ಕೊಟ್ಟಿದ್ದೀರಿ. ಇದು ತದ್ವಿರುದ್ಧ ಇರಬೇಕಾಗಿತ್ತು.

ಶ್ರೀ ಶಿವಾನಂದ ಹೆಚ್. ಕೌಜಲಗಿ: ಈ ಕಡೆ ಇಬ್ಬರು ಮಾತನಾಡಿದರೆ ಆ ಕಡೆ ಒಬ್ಬರು ಮಾತನಾಡಬೇಕು, ಹಾಗೆ ಪದ್ಧತಿ ಇದೆ. ಆ ಪ್ರಿಸಿಡೆಂಟನ್ನು ಮುರಿಯುವುದಕ್ಕೆ ಹೋಗಬೇಡಿ.

ಅಧ್ಯಕ್ಷರು: ಕೇಳಿ ಸ್ವಾಮಿ, ಇರುವ ಸದಸ್ಯರಿಗೆ ಸರಿಯಾದ ಟೈಂ ಅನ್ನು ಅಲಾಟ್ ಮಾಡಿದ ಆಧಾರದ ಮೇಲೆ ಹೇಳಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ನಾವು ಸ್ಪಷ್ಟವಾಗಿ ಚರ್ಚೆ ಮಾಡಿದ್ದೇವೆ. ಎಷ್ಟು ಸಮಯ ನಮಗೆ ಬೇಕಾಗುತ್ತದೆ ಎಂಬುದನ್ನು ತಮ್ಮ ಗಮನಕ್ಕೆ ತರುವ ಪ್ರಯತ್ನ ಮಾಡಿದ್ದೇವೆ. ಇತಿಹಾಸದಲ್ಲಿ 700 ನಿಮಿಷ ಆಡಳಿತ ಪಕ್ಷಕ್ಕೆ ಕೊಟ್ಟು 200 ನಿಮಿಷ ವಿರೋಧ ಪಕ್ಷಕ್ಕೆ ಕೊಟ್ಟಿರುವ ಯಾವುದೇ ದಾಖಲೆ ಇದೆಯೇ ಎಂದು ತೆಗೆದುನೋಡಿ. ಕಳೆದ ನಾಲ್ಕು ತಿಂಗಳಿಂದ ಅಧಿವೇಶನ ನಡೆದಿಲ್ಲ. ಸಾವಿರಾರು ಜನರ ಸಮಸ್ಯೆಗಳ ಬಗ್ಗೆ ಸರ್ಕಾರದ ಗಮನ ಸಳೆಯುವುದಕ್ಕಾಗಿಲ್ಲ.